ಓ. ಎಸ್. ನಂಃ 84/2021

**ಡಿ.ಡಬ್ಲ್ಯೂಃ 1**

**ದಿನಾಂಕಃ 29-08-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ. ಸಿ. ಹೆಚ್. ವಕೀಲರಿಂದಃ**

ಮಾವಿನತೋಪ ಗ್ರಾಮದ ಶಂಕರಗೌಡ ಶಿವನಗೌಡ ಬಸನಗೌಡರ ನಮ್ಮ ಸಂಬಂಧಿಕರು ಎಂದರೆ ಸರಿ. ಶಂಕರಗೌಡ ಶಿವನಗೌಡ ಬಸನಗೌಡರ ಅವರು ಮಾವಿನತೋಪ ಗ್ರಾಮದ ಖಾಯಂ ನಿವಾಸಿ ಎಂದರೆ ಸರಿ. ಅವರು ಮತ್ತು ನಾವು ಸಂಬಂಧಿಕರು ಎಂದರೆ ಸರಿ. ನಮ್ಮಲ್ಲಿ ಒಳ್ಳೆಯ ಸಂಬಂಧವಿದೆ ಎಂದರೆ ಸರಿ. ನಾವು ಮೂಲತಃ ಹುಬ್ಬಳ್ಳಿ ಶಹರದವರೆಂದರೆ ಸರಿಯಲ್ಲ, ಹಾನಗಲ್ ತಾಲೂಕಿನ ಜಕ್ಕನಾಯಕನಕೊಪ್ಪದವರು. ನಾನು ತಾತ್ಕಾಲಿಕವಾಗಿ ಹುಬ್ಬಳ್ಳಿಯಲ್ಲಿ ವಾಸವಿರುತ್ತೇನೆ ಎಂದರೆ ಸರಿ. ವಾದ ಪತ್ರದಲ್ಲಿ ತೋರಿಸಿದ ನನ್ನ ವಿಳಾಸಕ್ಕೆ ನನಗೆ ನ್ಯಾಯಾಲಯದಿಂದ ಸಮನ್ಸ ಬಂದಾಗ ನಾನು ತೆಗೆದುಕೊಂಡಿಲ್ಲವೆಂದು ನನಗೆ ವಾಪಸ್ಸು ಬಂದಿದೆ ಎಂದರೆ ಅದು ನನಗೆ ಬಂದಿಲ್ಲ. ಅದೇ ವಿಳಾಸಕ್ಕೆ ದಿಃ 20-10-2022 ರಂದು ಸಮನ್ಸ ಉದಯವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿದೆ ಎಂದರೆ ನಾನು ಅದನ್ನು ನೋಡಿಲ್ಲ. ಈ ದಾವೆಯ ವಿಚಾರವನ್ನು ನನಗೆ ಮಾವಿನತೋಪ ಗ್ರಾಮದಲ್ಲಿವರು ನಮ್ಮ ಸಂಬಂಧಿಕರು ತಿಳಿಸಿದರು. ಅವರು ತಿಳಿಸಿದ ಮೇಲೆ ನಾನು ನ್ಯಾಯಾಲಯದಲ್ಲಿ ಹಾಜರಾಗಿದ್ದೇನೆ ಎಂದರೆ ಸರಿ. ಈ ದಾವೆಯ ವಾದಿಗಳು ಮತ್ತು ಕೆಲವು ಪ್ರತಿವಾದಿಗಳು ಹಾಗೂ ನಮ್ಮ ಸಂಬಂಧಿಕರು ಮಾವಿನತೋಪ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ.

2. ವಾದಿಯರ ಮನೆತನದ ಸಂಪೂರ್ಣ ಪರಿಚಯ ನನಗಿಲ್ಲ, ಆದರೆ ನನಗೆ ಹೊಲ ಮಾರಿದ ಲಕ್ಷ್ಮಣ ಅವರ ಕುಟುಂಬದ ಬಗ್ಗೆ ಮಾತ್ರ ಸಂಪೂರ್ಣ ಪರಿಚಯವಿದೆ. ನಂತರ ಸಾಕ್ಷಿಯು ಅವರ ಅಕ್ಕ ತಂಗಿಯರು, ಹೆಂಡತಿ ಮತ್ತು ಮಗಳ ಬಗ್ಗೆ ಮಾಹಿತಿ ಇದೆ ಎಂದು ಸ್ವತಃ ಹೇಳಿದ್ದಾರೆ. ನಾನು ಹೊಲ ಖರೀದಿ ಮಾಡುವಾಗ ಆ ಮಾಹಿತಿ ನೋಡಿದ್ದೇನೆ. ಲಕ್ಷ್ಮಣ ಅವರ ತಂದೆ ತಾಯಿಗಳ ಬಗ್ಗೆ ನನಗೆ ವೈಯಕ್ತಿ ಮಾಹಿತಿ ಇಲ್ಲ. ಲಕ್ಷ್ಮಣ ಅವರ ತಂದೆ 2015 ರಲ್ಲಿ ಮೃತಪಟ್ಟಿದ್ದಾರೆಂದು ಗೊತ್ತು. ಲಕ್ಷ್ಮಣ ಅವರ ತಾಯಿ ಯಾವಾಗ ಮೃತಪಟ್ಟರೆಂದು ಗೊತ್ತಿಲ್ಲ.

3. ನಾನು ದಿಃ 25-11-2021ರ ಪೂರ್ವದಲ್ಲಿ ಲಕ್ಷ್ಮಣ ಅವರ ಮನೆಗೆ ಹೋಗಿಲ್ಲ. ಹೊಲ ತೆಗೆದುಕೊಳ್ಳುವ 2 ತಿಂಗಳ ಮುಂಚೆ, ಹೊಲ ಕೊಡುತ್ತಿದ್ದಾರೆಂದು ನನಗೆ ಗೊತ್ತಾಗಿತ್ತು. ಈ ವಿಷಯವು ಮಾವಿನತೋಪು ಗ್ರಾಮದ ನಮ್ಮ ಸಂಬಂಧಿಕರಾದ ಮಹೇಂದ್ರ ತಲ್ಲೂರು ಅವರಿಂದ ಗೊತ್ತಾಗಿತ್ತು. ಮಾವಿನತೋಪು ಗ್ರಾಮದ ನಮ್ಮ ಸಂಬಂಧಿಕರಾದ ಮಹೇಂದ್ರ ತಲ್ಲೂರು ಅವರಿಗೆ

ವಾದಿಯರ ಮನೆತನದ ಸಂಪೂರ್ಣ ಮಾಹಿತಿ ಇದೆಯೇ ಎಂದು ಕೇಳಿದ್ದಕ್ಕೆ ಸಾಕ್ಷಿ ಇರಬಹುದು, ನನಗೆ ಗೊತ್ತಿಲ್ಲವೆಂದು ಉತ್ತರಿಸಿದ್ದಾರೆ. ವಾದಿಗಳಾದ ಕರಬಸಪ್ಪ, ಕರಬಸವ್ವ, ಪ್ರಕಾಶ, ಗಂಗಮ್ಮ ಮತ್ತು ರೂಪಾ ಇವರ ಕುಟುಂಬದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ.

4. ಹೊಲ ತೆಗೆದುಕೊಳ್ಳುವ ಮುಂಚೆ ನಾನು 1ನೇ ಪ್ರತಿವಾದಿ ಲಕ್ಷ್ಮಣ ವೀರಪ್ಪ ವಡ್ಡರ ಅವರನ್ನು ಯಾಕೆ ಹೊಲ ಮಾರುತ್ತಿದ್ದೀರಿ ಎಂದು ಕೇಳಿದ್ದೆ, ಅದಕ್ಕೆ ಅವರು ತಮ್ಮ ತಂದೆ ಮಾಡಿದ ಸಾಲವಿದೆ, ಮಗಳ ಮದುವೆ ಮಾಡಿದ ಸಾಲವಾಗಿದೆ ಮತ್ತು ವೈಯಕ್ತಿಕ ಸಾಲವಿದೆ ಎಂದು ಹೇಳಿದ್ದರು. ಲಕ್ಷ್ಮಣ ಅವರ ತಂದೆ ಮಾಡಿದ ಸಾಲ ಎಷ್ಟು ಇತ್ತು, ಯಾರ ಹತ್ತಿರ ಸಾಲವಿತ್ತು ಎಂದು ನಾನು ತಿಳಿದುಕೊಳ್ಳಲಿಲ್ಲ. ಲಕ್ಷ್ಮಣ ತಮ್ಮ ಮಗಳ ಮದುವೆಯ ಸಲುವಾಗಿ ಯಾರ ಹತ್ತಿರ ಮತ್ತು ಎಷ್ಟು ಸಾಲ ಮಾಡಿದ್ದ ಹಾಗೂ ವೈಯಕ್ತಿಕ ಸಾಲ ಎಷ್ಟು ಮಾಡಿದ್ದ ಎಂದು ಕೇಳಲಿಲ್ಲ. ಸಾಕ್ಷಿಯು ಅದು ಅವರ ವೈಯಕ್ತಿಕ ವಿಷಯವಾದ್ದರಿಂದ ಕೇಳಲಿಲ್ಲವೆಂದು ಸ್ವತಃ ಹೇಳಿದ್ದಾರೆ.

5. ಲಕ್ಷ್ಮಣ ಅವರಿಗೆ ಒಬ್ಬರು ಅಕ್ಕ ಮತ್ತು ಇಬ್ಬರು ತಂಗಿಯರು ಎಂದು ಸ್ವಲ್ಪ ಮಾಹಿತಿ ಇದೆ. ಲಕ್ಷ್ಮಣ ಅವರ ಸಹೋದರಿಯರ ಹೆಸರು ಮೊದಲನೆಯವರು ಪಾರ್ವತಿ, ಗಂಗಮ್ಮ ಹಾಗೂ ರೂಪಾ ಎಂದು ಗೊತ್ತು. ಪಾರ್ವತಿ, ಗಂಗಮ್ಮ ಹಾಗೂ ರೂಪಾ ಅವರ ಮದುವೆ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ಪಾರ್ವತಿ, ಗಂಗಮ್ಮ ಹಾಗೂ ರೂಪಾ ಅವರ ತಂದೆ ವೀರಪ್ಪ ಅವರು ಎಲ್ಲಿ ಸಾಲ ಮಾಡಿದ್ದರೆಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಪಾರ್ವತಿ, ಗಂಗಮ್ಮ ಹಾಗೂ ರೂಪಾ ಅವರ ಮದುವೆ ಕಾಲಕ್ಕೆ ಏನೇನು ವರೋಪಚಾರ ಕೊಟ್ಟಿದ್ದಾರೆಂದು ವೈಯಕ್ತಿಕ ಮಾಹಿತಿ ಇಲ್ಲ.

6. ನಾನು ದಾವಾಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಉತಾರ, ಮುಟೇಷನ್ ನೋಡಿದ್ದೇನೆ. ಯಾವ ಮುಟೇಷನ್ ನೋಡಿರುವಿರಿ ಎಂದು ಕೇಳಿದ್ದಕ್ಕೆ ಸಾಕ್ಷಿ 2021ರ ಮುಟೇಷನ್ ನೋಡಿರುವುದಾಗಿ ಉತ್ತರಿಸಿದ್ದಾರೆ.

7. ನಾನು ಹಾಜರು ಪಡಿಸಿರುವ ದಾಖಲೆಗಳನ್ನು ನಾನು, ಲಕ್ಷ್ಮಣ ಮತ್ತು ಅವರ ಹೆಂಡತಿ ಮಕ್ಕಳು ತೆಗೆಸಿಕೊಂಡು ಬಂದಿದ್ದೇವೆಂದರೆ ಸರಿ, ತಕ್ಷಣವೇ ಸಾಕ್ಷಿ ಅವುಗಳನ್ನು ನಾನೇ ತೆಗೆಸಿಕೊಂಡು ಬಂದಿದ್ದೇನೆ, ಅವರೇಕೆ ತೆಗೆಸಲು ಬರುತ್ತಾರೆಂದು ಹೇಳಿದ್ದಾರೆ. ನಾನು ಆಸ್ತಿ ಖರೀದಿಸುವ ಪೂರ್ವದಲ್ಲಿ ಈ ರೀತಿ ಹೊಲ ಖರೀದಿಸುತ್ತಿದ್ದೇನೆ ಯಾರಾದರೂ ತಕರಾರು ಸಲ್ಲಿಸುವವರು, ಸಲ್ಲಿಸಬಹುದು ಎಂದು ನಾನು ಪತ್ರಿಕೆ ಪ್ರಕಟಣೆ ಕೊಟ್ಟಿಲ್ಲ. ಪತ್ರಿಕೆ ಪ್ರಕಟಣೆ ಕೊಡಲು ನನಗೆ ತೊಂದರೆ ಇರಲಿಲ್ಲ.

8. ವಾದಿಗಳಾದ ಕರಬಸಪ್ಪ, ಕರಬಸವ್ವ, ಪ್ರಕಾಶ, ಗಂಗಮ್ಮ ಮತ್ತು ರೂಪಾ ಮತ್ತು 1 ರಿಂದ 3 ನೇ ಪ್ರತಿವಾದಿಗಳ ಲಕ್ಷ್ಮಣ, ರತ್ನಮ್ಮ ಹಾಗೂ ಈರಮ್ಮ ಅವರ ಮನೆತನಕ್ಕೆ ಎಷ್ಟು ಆಸ್ತಿಗಳಿದ್ದವೆಂದು ನನಗೆ ಮಾಹಿತಿ ಇಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಕಾಗದ ಪತ್ರಗಳನ್ನು ಓದಿ ತಿಳಿದುಕೊಂಡಿದ್ದೇನೆ. ನಂತರ ಸಾಕ್ಷಿಯು ಸಂಪೂರ್ಣವಾಗಿ ತಿಳಿದುಕೊಳ್ಳಲು ಆಗಿಲ್ಲ, ಸ್ವಲ್ಪ ಓದಿ ತಿಳಿದುಕೊಂಡಿದ್ದೇನೆ.

9. 1 ನೇ ದಾವಾ ಆಸ್ತಿ ರಿ.ಸ ನಂಃ 55/1+2+3/ಪಿ1 ರಲ್ಲಿ 7 ಎಕರೆ 28 ಗುಂಟೆ ಜಮೀನಿನ ಬಗ್ಗೆ ವೀರಪ್ಪ, ಆತನ ಮಕ್ಕಳ ನಡುವೆ ಯಾವುದೇ ವಾಟ್ನಿ ಆಗಿಲ್ಲವೆಂದರೆ ಸರಿಯಲ್ಲ. ವಾಟ್ನಿ ಆಗಿದೆ. ಅವರ ನಡುವೆ 2003 ನೇ ಇಸವಿಯಲ್ಲಿ ವಾಟ್ನಿಯಾಗಿದೆ, ಅವರ ಹೆಸರು ಉತಾರದಲ್ಲಿ ನೋಡಿ ನಾನು ಖರೀದಿಸಿದ್ದೇನೆ. ಅದಕ್ಕೆ ಸಂಬಂಧಪಟ್ಟ ಮುಟೇಷನ್ ನಾನು ನೋಡಿಲ್ಲ. 2003 ನೇ ಇಸವಿಯಲ್ಲಿ ಆದ ವಾಟ್ನಿಯಂತೆ 1 ನೇ ಪ್ರತಿವಾದಿ ಲಕ್ಷ್ಮಣ ಅವರ ಹೆಸರು ಉತಾರದಲ್ಲಿ ದಾಖಲು ಆಗಿದೆ ಅದನ್ನು ನೋಡಿಯೇ ನಾನು ಖರೀದಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

10. 1 ನೇ ದಾವಾ ಆಸ್ತಿ ರಿ.ಸ ನಂಃ 55/1+2+3/ಪಿ1 ರಲ್ಲಿ 7 ಎಕರೆ 28 ಗುಂಟೆ ಜಮೀನಿನ ಕಂದಾಯ ದಾಖಲೆಗಳಲ್ಲಿ 1 ನೇ ಪ್ರತಿವಾದಿ ಲಕ್ಷ್ಮಣ ಅವರು ವಾದಿಗಳಿಗೆ ತಿಳಿಯದಂತೆ ತನ್ನ ಹೆಸರು ನಮೂದಿಸಿಕೊಂಡಿದ್ದಾನೆಂದರೆ ಗೊತ್ತಿಲ್ಲ. 1 ನೇ ದಾವಾ ಆಸ್ತಿ ರಿ.ಸ ನಂಃ 55/1+2+3/ಪಿ1 ರಲ್ಲಿ 7 ಎಕರೆ 28 ಗುಂಟೆ ಜಮೀನಿನ ಕಂದಾಯ ದಾಖಲೆಗಳಲ್ಲಿ 2015-16 ನೇ ಸಾಲಿನವರೆಗೆ ವೀರಪ್ಪನ ಹೆಸರೇ ಇತ್ತು ಎಂದರೆ, ತಾತ್ಕಾಲಿಕವಾಗಿ ಇತ್ತು, ಲಕ್ಷ್ಮಣ ತನ್ನ ಹೆಸರನ್ನು ನಮೂದಿಸಿಕೊಂಡಿದ್ದ. ಲಕ್ಷ್ಮಣನ ಹಿಸ್ಸೆ ಇತ್ತು, ಲಕ್ಷ್ಮಣ ಭಾಗ ಏನು ಇತ್ತೋ ಅದನ್ನೇ ನಾನು ಖರೀದಿಸಿದ್ದೇನೆ ಎಂದು ಸಾಕ್ಷಿ ಹೇಳಿದ್ದಾರೆ.

11. ನನ್ನ ಮೂಲ ಕಸುಬು ವ್ಯವಸಾಯ ಮತ್ತು ನನಗೆ ಮಾನವ ಸಂಪನ್ಮೂಲ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಿಮ್ಮ ತಿಂಗಳ ವೇತನ ಎಷ್ಟು ಇದೆ ಎಂದು ಕೇಳಿದ್ದಕ್ಕೆ ಸಾಕ್ಷಿ ತಾನು ಲೇಬರ್ ಕಾಂಟ್ರಾಕ್ಟರ ಎಂದು ತಿಂಗಳಿಗೆ 1 ರಿಂದ 1 ವರೆ ಲಕ್ಷ ರೂಪಾಯಿ ಆದಾಯ ಇದೆ ಎಂದು ಉತ್ತರಿಸಿದ್ದಾರೆ. ನಾನು ಆದಾಯ ತೆರಿಗೆ ಪಾವತಿಸುತ್ತೇನೆ. ಆದಾಯ ತೆರಿಗೆ ಪಾವತಿಯಲ್ಲಿ ನನಗೆ ಬಂದ ಆದಾಯ ಮತ್ತು ನಾನು ಮಾಡಿದ ಖರ್ಚನ್ನು ತೋರಿಸುತ್ತೇನೆ ಎಂದರೆ ಸರಿ.

12. ನಾನು 2021 ನೇ ಇಸವಿಯಲ್ಲಿ ಪಾವತಿಸಿರುವ ಆದಾಯ ತೆರಿಗೆ ಮಾಹಿತಿಯಲ್ಲಿ ದಾವಾಸ್ತಿಯನ್ನು ಖರೀದಿಸಿದ ಮೊತ್ತವನ್ನು ತೋರಿಸಿದ್ದೇನೆ. ಸದರಿ ಮಾಹಿತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ.ನಾನು ಹುಬ್ಬಳ್ಳಿಯಲ್ಲಿ ಆದಾಯ ತೆರಿಗೆ ಪಾವತಿಸುತ್ತೇನೆ.

13. ಈ ದಾವೆಯ ಸಮನ್ಸ ಮತ್ತು ನೋಟಿಸ್ 1 ರಿಂದ 3 ನೇ ಪ್ರತಿವಾದಿಗಳಾದ ಲಕ್ಷ್ಮಣ, ರತ್ನಮ್ಮ ಹಾಗೂ ಈರಮ್ಮ ಅವರಿಗೆ ಬಂದ ವಿಷಯವನ್ನು ನನಗೆ ನಮ್ಮ ಸಂಬಂಧಿಕರು ತಿಳಿಸಿದ್ದಾರೆಂದರೆ ಸರಿಯಲ್ಲ. ಈ ದಾವೆಯ ಸಮನ್ಸ ಮತ್ತು ನೋಟಿಸ್ ಮತ್ತು ಆಸ್ತಿಯನ್ನು ಮಾರಾಟ ಮಾಡಬಾರದೆಂದು ಆದ ಆದೇಶವು 1 ರಿಂದ 3 ನೇ ಪ್ರತಿವಾದಿಗಳಾದ ಲಕ್ಷ್ಮಣ, ರತ್ನಮ್ಮ ಹಾಗೂ ಈರಮ್ಮ ಅವರಿಗೆ ನೋಂದಾಯಿತ ಅಂಚೆಯ ಮೂಲಕ ಬಂದ ವಿಷಯವನ್ನು ನನಗೆ ತಿಳಿಸಿಲ್ಲ. ಸದರಿ ಆದೇಶದ ವಿಷಯ ನ್ಯಾಯಾಲಯದಿಂದ ಹೋದ ತಕ್ಷಣ ಶಂಕರಗೌಡ ಶಿವನಗೌಡ ಬಸನಗೌಡರ ಅವರಿಗೆ ಗೊತ್ತಾಗಿದೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ ಅದು ತಮಗೆ ಗೊತ್ತಿಲ್ಲವೆಂದು ಉತ್ತರಿಸಿದ್ದಾರೆ. ನ್ಯಾಯಾಲಯದಿಂದ ದಾವಾಸ್ತಿಯನ್ನು ಮಾರಾಟ ಮಾಡಬಾರದೆನ್ನುವ ಆದೇಶದ ವಿಷಯ ನನಗೂ, ಶಂಕರಗೌಡ ಶಿವನಗೌಡ ಬಸನಗೌಡರ ಅವರಿಗೆ ಗೊತ್ತಿದ್ದರು ಸಹ ನಾವು, 1 ಮತ್ತು 2 ನೇ ಪ್ರತಿವಾದಿಗಳು ಹಾಗೂ ಅವರ ಕುಟುಂಬದವರು ಸೇರಿಕೊಂಡು ನನ್ನ ಹೆಸರಿನಲ್ಲಿ ತೋರುಗಾಣಿಕೆಯ ಖರೀದಿ ಪತ್ರ ಸೃಷ್ಟಿಸಿದ್ದೇವೆಂದರೆ ಸುಳ್ಳು. ನ್ಯಾಯಾಲಯದಿಂದ ಆದ ಆದೇಶದ ವಿಷಯ ತಮಗೆ ಗೊತ್ತೇ ಇರಲಿಲ್ಲವೆಂದು ಸಾಕ್ಷಿ ಸ್ವತಃ ಹೇಳಿದ್ದಾರೆ. ನ್ಯಾಯಲಯದಿಂದ ದಾವಾಸ್ತಿಯನ್ನು ಮಾರಾಟ ಮಾಡಬಾರದೆನ್ನುವ ವಿಷಯ ನನಗೆ, ಶಂಕರಗೌಡ ಶಿವನಗೌಡ ಬಸನಗೌಡರ ಅವರಿಗೆ ಗೊತ್ತಿದ್ದರು ಸಹ ನಾವು, 1 ಮತ್ತು 2 ನೇ ಪ್ರತಿವಾದಿಗಳು ಹಾಗೂ ಅವರ ಕುಟುಂಬದವರು ಸೇರಿಕೊಂಡು ವಾದಿಗಳ ಹಿಸ್ಸೆಯನ್ನು ಎತ್ತಿಹಾಕಬೇಕೆಂದು ಖರೀದಿ ಪತ್ರ ಮಾಡಿಕೊಂಡಿದ್ದೇನೆಂದರೆ ಸುಳ್ಳು. 1 ನೇ ಪ್ರತಿವಾದಿ ಲಕ್ಷ್ಮಣ ಹಾಗೂ 2 ನೇ ಪ್ರತಿವಾದಿ ರತ್ನಮ್ಮ ದಾವಾಸ್ತಿಯ ಖರೀದಿ ಪತ್ರದಲ್ಲಿ ತೋರಿಸಿದ ಹಣವನ್ನು ಕೊಟ್ಟಿಲ್ಲವೆಂದರೆ ಸುಳ್ಳು, ಬ್ಯಾಂಕ್ ಮುಖಾಂತರ ಕೊಟ್ಟಿದ್ದೇವೆ. ವಾದಿಯ ಹಿಸ್ಸೆಯನ್ನು ಎತ್ತಿಹಾಕಬೇಕೆಂದು ಬ್ಯಾಂಕ್ ಮುಖಾಂತರ ಕೊಟ್ಟಿದ್ದೇವೆಂದು ಸುಳ್ಳು ದಾಖಲೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

14. ವೀರಪ್ಪನಿಗೆ ಸಾಲವಿತ್ತು ಮತ್ತು 1 ನೇ ಪ್ರತಿವಾದಿ ಲಕ್ಷ್ಮಣನ ಕುಟುಂಬಕ್ಕೆ ಸಾಲವಿತ್ತೆಂದು ನಾನು ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ. ನಾನು ಖರೀದಿ ಮಾಡಿರುವೆನೆಂದು ಹೇಳಿದ ದಾವಾಸ್ತಿಯು ಯಾವತ್ತಿಗೂ ನನ್ನ ಕಬ್ಜೆಯಲ್ಲಿ ಇಲ್ಲವೆಂದರೆ ಸರಿಯಲ್ಲ. ನನ್ನ ಕಬ್ಜೆಯಲ್ಲಿಯೇ ಇದೆ. ನನ್ನ ಕಬ್ಜೆಯಲ್ಲಿಯೇ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಓ. ಎಸ್. ನಂಃ 84/2021

**ಡಿ.ಡಬ್ಲ್ಯೂಃ 1**

15. 2021 ನೇ ಇಸವಿಯಲ್ಲಿ ಬಡಸಂಗಾಪುರ ಗ್ರಾಮದಲ್ಲಿ 1 ಎಕರೆ ಹೊಲಕ್ಕೆ 25-30 ಲಕ್ಷ ರೂಪಾಯಿ ಬೆಲೆ ಇತ್ತೆಂದರೆ ನನಗೆ ಗೊತ್ತಿಲ್ಲ. ನಾನು ಜಮೀನು ತೆಗೆದುಕೊಳ್ಳುವ ಮುಂಚೆ ಅಕ್ಕ ಪಕ್ಕದ ಜಮೀನಿನ ಬೆಲೆಯನ್ನು ತಿಳಿದುಕೊಳ್ಳಲಿಲ್ಲ. ನಾನು ಖರೀದಿರುವೆನೆಂದು ಹೇಳುವ ದಾವಾಸ್ತಿಯು ವಾದಿಯರ ಹಿಸ್ಸೆಗೆ ಬಂಧನಕಾರಿಯಲ್ಲವೆಂದರೆ ಸರಿಯಲ್ಲ. ದಾವಾಸ್ತಿಯನ್ನು ಖರೀದಿಸಲು ಹಣ ಕೊಡುವ ಸಾಮರ್ಥ್ಯವು ಸಹ ನನಗೆ ಇರಲಿಲ್ಲವೆಂದರೆ ಸುಳ್ಳು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೆ. ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 29-08-2026

Sd/-

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್.ಸಿ,

ಹಿರೇಕೆರೂರು